ಬಿಕ್ಕಿದರು. ಮತ್ತೊಮ್ಮೆ ಕರೆಂಟ್ ಹೊಡೆದಂಥ ಅನುಭವ ನನಗೆ. ನನ್ನ ಕಾಕಾ ಹೀಗೆ ಮಾಡಬಹುದೆಂದು ಕನಸಿನಲ್ಲೂ ಊಹಿಸಲಾರೆ. "ಆಂ..." ಎಂದು ಬಾಯ್ತೆರೆದೆ. "ಏನ್ ಮಾಡ್ಲಿ? ಅಕಿ ಹಟಕ್ಕಿಂತ ಬಾಳಿ ಬೆಳಗಬೇಕಾಗಿದ್ದ ಮಗ, ಸೊಸಿ, ಮೊಮ್ಮಕ್ಕಳ ಬದುಕು ದೊಡ್ಡದನ್ನಸ್ತು. ಹಂಗ ಮಾಡಿಬಿಟ್ಟೆ. ನಾ ಸುಮ್ಮನಿದ್ರ ಅವರು ಬಂದ ಮ್ಯಾಲೆ ಝಗಳಾಗ್ತಿತ್ತು. ಸಾಯ್ತಿದ್ರೋ... ಬಿಡ್ತಿದ್ರೋ ಯಾರಿಗೊತ್ತು? ಆದರ ನಾ ಈ ಮಹಾಪರಾಧ ಮಾಡಿಬಿಟ್ಟೆ. ನನ್ನ ಹೆಂಡ್ತಿಗೆ ದ್ರೋಹ... ಮಾಡಿದೆ. ಇದು ನನ್ನ ಒಳಗಿಂದವಳಗ ತಿನ್ಲಿಕ್ಕತ್ತದ. ಅಜಯಗ ಇದೆಲ್ಲಾ ಗೊತ್ತಿಲ್ಲ. ಯಾರಿಗೂ ಗೊತ್ತಿಲ್ಲ. ನೀ ಯಾರ ಮುಂದೂ ಹೇಳಬ್ಯಾಡಾ ಮತ್ತ..." ಎಂದು ಬಿಕ್ಕುತ್ತ ಕಣ್ಣೊರೆಸಿಕೊಂಡರು. ಪರಮಾತ್ಮ ಹೊಟ್ಟೆಯೊಳಗೆ ಇಳಿದರೆ ಒಳಗಿನ ಗುಟ್ಟನ್ನೆಲ್ಲ ಹೊರಗೆ ಕಕ್ಕಿಸುತ್ತಾನಂತೆ. ನಿಜವಾಗಿತ್ತು. "ಅದಕ್ಕ... ಅಕೀಗೆ ಏನೇನು ಭಾಳ ಪ್ರೀತಿ ಇತ್ತೋ ಒಂದಷ್ಟು ತಂದೀನಿ. ನೋಡಿಲ್ಲೆ... ಮೇಕಪ್ ಬಾಕ್ಸು, ಗೆಜ್ಜಿ, ಸೀರಿ, ಡ್ರೆಸ್ಸು, ಚಪ್ಪಲಿ, ಬಳಿ... ಎಲ್ಲಾ ಅಕಿನ್ನ ಹಿಂಬಾಲಿಸಿಗೊಂಡು ಹೋಗ್ಲಿ" ಎಂದರು. "ನಿಮಗ ಸಮಾಧಾನ ಆಗ್ತಿದ್ರ ಹಂಗ ಮಾಡ್ರಿ ಕಾಕಾ. ಆಗಿದ್ದಾತು. ನಡ್ರಿ, ಮನಿಗೆ ಹೋಗೋಣು" ಎಂದು ಎದ್ದೆ.

ಮನ ಗರ ಬಡಿದವರಂತಾಗಿತ್ತು. ಭಾವುಕನಾಗಿ ಹಿಂದೆ ತಿರುಗಿ ಇಂದು ಕ್ಷಣ ನಿಂತು ಕಣ್ಣೊರೆಸಿಕೊಂಡೆ. ಅವರು ಹೇಳಿದ್ದು ಸತ್ಯವೋ... ಸುಳ್ಳೋ ತಿಳಿಯದೇ ಗೊಂದಲದ ಗೂಡಾಗಿದ್ದೆ. ಈ ಸತ್ಯ ಕಠೋರವಷ್ಟೇ ಅಲ್ಲ ನಂಬಲಸಾಧ್ಯವಾಗಿತ್ತು. ನನ್ನ ಪ್ರೀತಿಯ ಗುರುಕಾಕಾ ಕಾಕೂನ ನೆನಪಿನಲ್ಲಿ ಭ್ರಮಾಧೀನರಾಗಿ... ಕುಡಿದು ಈ ರೀತಿ ಮಾತನಾಡಿದರೆ? ಅಥವಾ ನಿಜವಾಗಿಯೂ... 'ಛೇ'ಎಂದು ತಲೆಯಾಡಿಸಿ ಬ್ಯಾಗಿನಲ್ಲಿ ಬಾಟಲ್ ಮುಂತಾದವನ್ನು ತುಂಬಿದೆ. ಕೆಳಗೊಂದು ಮಡಿಸಿದ ಕಾಗದ. ತೆರೆದಾಗ ಕಾಕಾನ ಕೈಬರಹ. "ನನ್ನ ಸಾವಿಗೆ ಯಾರೂ ಕಾರಣರಲ್ಲ. ಪ್ರೀತಿಯ ಹೆಂಡತಿಯನ್ನು ಅಗಲಿ ಇರಲಾರದೇ ಹಿಂಬಾಲಕನಾಗಿ ಹೋಗುತ್ತಿದ್ದೇನೆ" ಎಂಬ ಒಕ್ಕಣೆ. "ಕಾಕಾ..." ಎಂದು ಚೀರುತ್ತಲೇ ತಿರುಗಿದೆ. ಆಗಲೇ ಕಾಕೂನ ಪ್ರೀತಿಯ ವಸ್ತುಗಳ ಜೊತೆ ಕಾಕಾ ಅಂಚಿನಲ್ಲಿ ಜಾರುತ್ತಿದ್ದರು. 'ಧಡಾಲ್' ಎಂದು ಕೆಳಗೆ ಬಿದ್ದ ಸದ್ದು. ಕಾಕೂನ ಅತ್ಯಂತ ಪ್ರೀತಿಪಾತ್ರವಾದವುಗಳಲ್ಲಿ ಮೊದಲ ಸ್ಥಾನ ಕಾಕಾನದು ಎಂದು ನನಗೆ ಹೊಳೆದಿರಲೇ ಇಲ್ಲ. ಕಣ್ಣಂಚಿನಲ್ಲಿ ಜಾರುತ್ತಿದ್ದ ಹನಿ ತೊಡೆಯದೇ ಸ್ತಂಭೀಭೂತನಾಗಿ ನಿಂತುಬಿಟ್ಟೆ.

## ಮಧುರಾ ಕರ್ಣಮ್

ಲೇಖಕಿ ಮಧುರಾ ಬೆಳಗಾವಿಯವರು. ವಿದ್ಯಾಭ್ಯಾಸ – ಬಿ.ಎಸ್ಸಿ., ಎಲ್.ಎಲ್.ಬಿ. ವರೆಗೆ. ಕತೆ, ಹಾಸ್ಯಬರಹಗಳನ್ನು ಬರೆದಿದ್ದಾರೆ. 'ಮರಳಿ ಬಂದನಾ ವಸಂತ', 'ಋಣ', 'ಅವಳ ಭಾವಗಳ ಸುತ್ತ', 'ಗುಂಡಪುರಾಣ', 'ಜೀವಧಾರಾ... ನಿರಂತರಾ...', 'ಆಕ್ರಮಣ' ಅವರ ಕೆಲವು ಕೃತಿಗಳಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.